**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**Spl.C.Lok.14/2014**

| | | |
|---|---|---|
| ಸಾಕ್ಷಿದಾರರ ಹೆಸರು | : | ಇ. ನಾಗರಾಜಪ್ಪ |
| ತಂದೆಯ ಹೆಸರು | : | ಈಶ್ವರಪ್ಪ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ನಿವೃತ ಸಹಾಯಕ ಕಾರ್ಯಪಾಲಕ ಅಭಿಯಂತರರು |
| ವಾಸ ಸ್ಥಳ | : | ದಾವಣಗೆರೆ |

ಪಿ.ಡಬ್ಲ್ಯೂ 5

ಸಿ.ಡಬ್ಲ್ಯೂ 10

ದಿ: 26-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ (ಶ್ರೀ ಟಿ.ಆರ್.ಎಸ್.)**:

1. 2012 ರಿಂದ 2020 ರವರಗೆ ನಾನು ಸಹಾಯಕ ಕಾರ್ಯಪಾಲಕ ಅಭಿಯಂತರರರಾಗಿ ದಾವಣಗೆರೆಯ PWD ಯಲ್ಲಿ ಕೆಲಸ ಮಾಡುತ್ತಿದ್ದೆ. ಈ ಪ್ರಕರಣದಲ್ಲಿ ದಿಃ 07-03-2014 ರಂದು ಚಾಸಾ-22 ರವರು ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಕೃತ್ಯ ನಡೆದ ಸ್ಥಳದ ನಕಾಶೆಯನ್ನು ತಯಾರಿಸಿ ಕೊಡಲು ಹೇಳಿದರು. AEE ಶಿವಾನಂದರವರು ನನಗೆ ನಕ್ಷೆ ತಯಾರಿಸಲು ಆದೇಶ ನೀಡಿದರು. ನಂತರ ನಾನು ನಕ್ಷೆಯನ್ನು ತಯಾರಿಸಿ ಲೋಕಾಯುಕ್ತ ಪೊಲೀಸರಿಗೆ ಕೊಟ್ಟಿರುತ್ತೇನೆ. ಆ ನಕ್ಷೆಯನ್ನು ಈಗ ನೋಡಿ ಅದರಲ್ಲಿರುವ ನನ್ನ ಸಹಿ ಗುರುತಿಸುತ್ತೇನೆ. ನಕ್ಷೆಯನ್ನು ನಿಪಿ-76 ಅಂತ, ಸಾಕ್ಷಿ ಸಹಿಯನ್ನು ನಿಪಿ-76(ಎ) ಅಂತ ಗುರುತಿಸಲಾಯಿತು. ನನ್ನ ಜೊತೆ ಚಾಸಾ-2 ರವರು ಸಹ ನಿಪಿ-76 ಕ್ಕೆ ಸಹಿ ಮಾಡಿರುತ್ತಾರೆ. ನಿಪಿ-76 ನ್ನು ನಾನು ನಮ್ಮ ಕಛೇರಿಗೆ ಸಲ್ಲಿಸಿದ್ದೇನೆ. ನಂತರ ಅದನ್ನು ಲೋಕಾಯುಕ್ತ ಪೊಲೀಸರಿಗೆ

ಕಳುಹಿಸಲಾಯಿತು. AEE ರವರು ಲೋಕಾಯುಕ್ತ ಪೊಲೀಸರಿಗೆ ಕಳುಹಿಸಿದ ಬಗ್ಗೆ ಕವಚ ಪತ್ರವನ್ನು ನೋಡುತ್ತಿದ್ದು, ಅದನ್ನು ನಿಪಿ- 77 ಅಂತ ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಆರ್.ಕೆ., ವಕೀಲರಿಂದ ಆರೋಪಿತರ ಪರವಾಗಿ**:

2. ನಕ್ಷೆಯನ್ನು ತಯಾರಿಸುವಾಗ ಉತ್ತರ ದಿಕ್ಕನ್ನು ಮೇಲ್ಭಾಗದಲ್ಲಿ ಕಾಣಿಸುತ್ತಾರೆ ಅಂದರೆ ನಿಜ. ಸಾಕ್ಷಿದಾರರು ಹೇಳುತ್ತಾರೆ ನಾವು ಸ್ಥಳಕ್ಕೆ ಹೋದಾಗ ರಸ್ತೆಯ ಎದುರುಗೆ ನಿಂತು ಆ ನಕ್ಷೆಯನ್ನು ತಯಾರಿಸಲಾಯಿತು. ನಿಪಿ-76 ನ್ನು ಸ್ಥಳದಲ್ಲಿಯೇ ತಯಾರಿಸಿದೆನು, ಅದೇ ಕಚ್ಚಾ ನಕಾಶೆ ಇರುತ್ತದೆ. ಆ ನಕಾಶೆಯನ್ನು ತಯಾರಿಸುವ ಕಾಲಕ್ಕೆ ಲೋಕಾಯುಕ್ತ ಪೊಲೀಸರು ಹೊರಗಡೆ ಇದ್ದರು, ಒಳಗಡೆ ಇರಲಿಲ್ಲ. ಸ್ಥಳಕ್ಕೆ ನನ್ನನ್ನು ಚಾಸಾ-2 ರವರು ಕರೆದುಕೊಂಡು ಹೋದರು. ನಾನು ಸ್ಥಳವನ್ನು ತಲುಪಿದಾಗ ಅಲ್ಲಿ ಲೋಕಾಯುಕ್ತ ಪೊಲೀಸರು ಇದ್ದರು.

3. ಆರೋಪಿಯ ಕಛೇರಿಯ ಕೊಠಡಿಯು ಸ್ಥಳದಲ್ಲಿರುವ ರಸ್ತೆಯಿಂದ ಸುಮಾರು 15 ಮೀ. ದೂರ ಇರುತ್ತದೆ. ಆರೋಪಿಯ ಕೊಠಡಿಯು ಯಾವ ದಿಕ್ಕಿನಲ್ಲಿ ಇರುತ್ತದೆ ಅಂದರೆ ಕಟ್ಟಡದ ಉತ್ತರ ದಿಕ್ಕಿಗೆ ಇರುತ್ತದೆ. ಅವರ ಕೊಠಡಿಯಲ್ಲಿದ್ದಂತಹ ಚೇರ್, ಟೇಬಲ್ ಪೂರ್ವ ದಿಕ್ಕಿಗೆ ಮುಖವಾಗಿತ್ತು.

4. ನಾನು ಡಿಪ್ಲೋಮಾ ಸಿವಿಲ್ ಇಂಜಿನಿಯರ್ ಮಾಡಿದ್ದೇನೆ. ನನಗೆ ನಕ್ಷೆ ತಯಾರಿಸುವ ಅನುಭವ ಇಲ್ಲ ಪೊಲೀಸರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ ನಕ್ಷೆ ತಯಾರಿಸಿಲ್ಲ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.